ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಡಾ || ವಿಶಾಲ್ ಕಾಖಂಡಕಿ -ವಿರುದ್ಧ-ಡಾ || ಅಶ್ವಿನಿ ಕಾಖಂಡಕಿ

ಸಿವಿಲ್ ಪಿಟಿಷನ್ಸಂಖ್ಯೆ: 100179/2016, ದಿನಾಂಕ 6 ನೇ ಅಕ್ಟೋಬರ್, 2017.

ಆಜ್ಞೆ

ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್:

ಈ ಅರ್ಜಿಯು, ಸಿವಿಲ್ ಪ್ರಕ್ರಿಯಾ ಸಂಹಿತೆಯ 24 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯಾಗಿದ್ದು, ಇದರಲ್ಲಿ ಮಕ್ಕಳ ಅಭಿರಕ್ಷೆಯ ವ್ಯವಹರಣೆಯಾದ ಜಿ ಮತ್ತು ಡಬ್ಲ್ಯೂಸಿಸಂಖ್ಯೆ: 229/2010 ನ್ನು ಬೆಂಗಳೂರಿನ III ನೇ ಹೆಚ್ಚುವರಿ ಪ್ರಧಾನ ನ್ಯಾಯಾಧೀಶರ ನ್ಯಾಯಾಲಯದಿಂದ ಬೆಳಗಾವಿಯ ಕೌಟುಂಬಿಕ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಕೋರಲಾಗಿರುತ್ತದೆ.

2. ಈ ಅರ್ಜಿಯಲ್ಲಿ ಅರ್ಜಿದಾರನು ಪತಿಯಾಗಿದ್ದು, ಪ್ರತ್ಯರ್ಜಿದಾರಳು ಆತನ ಪತ್ನಿಯಾಗಿರುತ್ತಾಳೆ.ಅವರ ವಿವಾಹವುದಿನಾಂಕ: 12.08.2009 ರಂದು ಹಿಂದೂ ವಿಧಿ ವಿಧಾನಗಳ ಪ್ರಕಾರ ಶಾಸ್ತ್ರೋಕ್ತವಾಗಿ, ಆರ್ಯ ವೈಶ್ಯ ಅಭ್ಯುದಯ ಸಂಘ, ಸಿಕಂದರಾಬಾದ್ನಲ್ಲಿ ನೇರವೇರಿರುತ್ತದೆ.ದಿನಾಂಕ: 26.07.2010 ರಂದು ಪ್ರತ್ಯರ್ಜಿದಾರಳು ಒಂದು ಗಂಡು ಮಗುವಿಗೆ ಜನ್ಮ ನೀಡಿದ್ದು ಅದಕ್ಕೆ ವಿಖ್ಯಾತ್ ಎಂದು ನಾಮಕರಣ ಮಾಡಲಾಯಿತು ಮತ್ತು ಈ ಮಗುವಿನ ಪಾಲನೆಗಾಗಿ ಅರ್ಜಿದಾರ ಮತ್ತು ಪ್ರತ್ಯರ್ಜಿದಾರಳು ಜಗಳ ನಡೆಸಿದ್ದಾರೆ.

3. ಅರ್ಜಿದಾರನು ಹೇಳಿರುವುದೇನೆಂದರೆ, ವಿವಾಹದ ತರುವಾಯ ಆತನು ಮತ್ತು ಆತನ ಪತ್ನಿಯು, ಹೆಚ್ಚಿನ ಕಲಿಕೆ ಮತ್ತು ಉತ್ತಮ ಭವಿಷ್ಯವನ್ನು ಕಂಡುಕೊಳ್ಳಲು ಚೆನ್ನೈಗೆ ಹೋಗಿರುತ್ತಾರೆ ಎಂಬುದಾಗಿದೆ.ತದನಂತರ, ಅರ್ಜಿದಾರನಿಗೆ ಬೆಂಗಳೂರಿನಲ್ಲಿ ಒಂದು ಉದ್ಯೋಗ ದೊರಕಿದ ಕಾರಣದಿಂದ ಅವರಿಬ್ಬರೂ ಬೆಂಗಳೂರಿಗೆ ಬಂದು ನೆಲೆಸಿರುತ್ತಾರೆ.ಅರ್ಜಿದಾರನು 2013 ರಲ್ಲಿ ವಿಖ್ಯಾತ್ ಕಣ್ಣು ಮತ್ತು ರೆಟಿನಾ ಕೇಂದ್ರವೆಂಬ ಸ್ವಂತ ಕ್ಲಿನಿಕ್ ಅನ್ನು ತನ್ನ ಪೋಷಕರಿಂದ ಹಣಕಾಸು ಸಹಾಯ ಪಡೆದು ಪ್ರಾರಂಭಿಸಿದ್ದು, ಪೋಷಕರು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ಅದರಲ್ಲಿ ಬಂದ ಸುಮಾರು ಒಂದು ಕೋಟಿಯಷ್ಟು ಹಣವನ್ನು ಕ್ಲಿನಿಕ್ಕಿಗೆ ಅಗತ್ಯವಿರುವ ಸಲಕರಣೆಗಳನ್ನು ಖರೀದಿಸಲು ಅರ್ಜಿದಾರನಿಗೆ ನೀಡಿರುತ್ತಾರೆ.ಅರ್ಜಿದಾರನ ಕುಟುಂಬವು ಬೆಂಗಳೂರಿನಲ್ಲಿ ಹಣಕಾಸು ಸಂಕಷ್ಟಕ್ಕೆ ಸಿಲುಕಿದ ಕಾರಣದಿಂದ, ಅರ್ಜಿದಾರ ಮತ್ತು ಪ್ರತ್ಯರ್ಜಿದಾರಳು ಕುಟುಂಬದ ಉತ್ತಮ ಭವಿಷ್ಯ ಹಾಗೂ ಹಿತದೃಷ್ಟಿಯಿಂದ ಅರ್ಜಿದಾರನ ಸ್ವಂತ ಊರಾದ ಬೆಳಗಾವಿಗೆ ಹೋಗಿ ನೆಲೆಸಲು ಸಮ್ಮತಿಸಿದ್ದರು.ಅರ್ಜಿದಾರನು ತನ್ನ ವೈದ್ಯಕೀಯ ವೃತ್ತಿಯನ್ನು, ಬೆಂಗಳೂರಿನಿಂದ ಬೆಳಗಾವಿಗೆ 2016 ರ ಮೇ ನಲ್ಲಿ ಸ್ಥಳಾಂತರಿಸಿದನು.ಆ ಸಮಯದಲ್ಲಿ, ಅರ್ಜಿದಾರನು ಪ್ರತ್ಯರ್ಜಿದಾರಳ ಸಮ್ಮತಿಯೊಂದಿಗೆ ತನ್ನ ಮಗನನ್ನು ತನ್ನೊಂದಿಗೆ ಕರೆತಂದು ಬೆಳಗಾವಿಯಲ್ಲಿ ಶಾಲೆಗೆ ಸೇರಿಸಿದನು.ಪ್ರಾರಂಭದಲ್ಲಿ ಬೆಳಗಾವಿಗೆ ಸ್ಥಳಾಂತರಗೊಳ್ಳಲು ಸಮ್ಮತಿಸಿದ್ದ ಪ್ರತ್ಯರ್ಜಿದಾರಳು, ನಂತರ ತನ್ನ ಮನಸ್ಸನ್ನು ಬದಲಾಯಿಸಿ ಬೆಳಗಾವಿಗೆ ಬರಲು ನಿರಾಕರಿಸಿರುತ್ತಾಳೆ.ಪ್ರತ್ಯರ್ಜಿದಾರಳು ವಿರೋಧ ಭಾವವನ್ನು ಬೆಳಸಿಕೊಂಡು ತನ್ನೊಂದಿಗೆ ಕ್ಷುಲ್ಲಕ ವಿಷಯಗಳಿಗೂ ಜಗಳವಾಡುತ್ತಿದ್ದಳು ಎಂದು ಅರ್ಜಿದಾರನು ಆರೋಪಿಸಿದ್ದಾನೆ.ಇದರ ಪರಿಣಾಮ ಮನೆಯ ವಾತಾವರಣದ ಶಾಂತಿಭಂಗವಾಗಿತ್ತು.ಪ್ರತ್ಯರ್ಜಿದಾರಳು, ಬೆಳಗಾವಿಗೆ ಬರಲು ನಿರಾಕರಿಸಿದ ನಂತರ, ಒಂದು

ಪಿ.ಜಿ. ಹಾಸ್ಟೆಲ್‌ನಲ್ಲಿರಲು ಶುರು ಮಾಡಿದ್ದು, ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನ ವ್ಯವಹರಣೆಗಳನ್ನು ಆರಂಭಿಸಿರುತ್ತಾಳೆ.ತದನಂತರ, ಮಗುವಿನ ಅಭಿರಕ್ಷೆಯನ್ನು ಪಡೆಯುವ ಸಲುವಾಗಿ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿದಾರನು ಈ ಅರ್ಜಿಯನ್ನು ಬೆಳಗಾವಿಯ ಕೌಟುಂಬಿಕ ನ್ಯಾಯಾಲಯಕ್ಕೆ ವರ್ಗಾಯಿಸಲು ಕೋರಿರುತ್ತಾನೆ.

4. ಪ್ರತ್ಯರ್ಜಿದಾರಳು, ವರ್ಗಾವಣೆಯನ್ನು ಕೋರಿರುವ ಈ ಅರ್ಜಿಗೆ, ಯಾವುದೇ ಆಕ್ಷೇಪಣಾ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು ಈ ನ್ಯಾಯಾಲಯವು, ಜಿ ಮತ್ತು ಡಬ್ಲ್ಯೂಸಿ.ಸಂಖ್ಯೆ: 229/2016 ರಲ್ಲಿನ ಮುಂದಿನ ವ್ಯವಹರಣೆಗಳಿಗೆ ತಡೆಯಾಜ್ಞೆ ನೀಡಿರುವುದು ಕಂಡುಬರುತ್ತದೆ.ಅರ್ಜಿದಾರಳು ಈ ಆದೇಶವನ್ನು ತೆರವುಗೊಳಿಸಲು ಅರ್ಜಿ ಸಲ್ಲಿಸಿದ್ದು, ಅರ್ಜಿಯ ಜೊತೆಯಲ್ಲಿ ಸಲ್ಲಿಸಿದ ಅಫಿಡವಿಟ್‌ನಲ್ಲಿ ಆಕೆಯು ಆರೋಪಿಸಿರುವುದೇನೆಂದರೆ, ಆಕೆ ಮತ್ತು ಅರ್ಜಿದಾರನು ನವೆಂಬರ್ 2012 ರಿಂದ ಮೇ 2016 ರ ವರೆಗೆ ಒಟ್ಟಿಗೆ ಬೆಂಗಳೂರಿನಲ್ಲಿ ವಾಸವಿದ್ದರು ಎಂಬುದಾಗಿದೆ.  ದಿನಾಂಕ: 06.05.2016 ರಂದು ಅರ್ಜಿದಾರನು ಬಲವಂತವಾಗಿ ಮಗುವನ್ನು ಕರೆದುಕೊಂಡು ಆಕೆಗೂ ತಿಳಿಸದೇ ಹಾಗೆ ಬೆಂಗಳೂರನ್ನು ತೊರೆದಿದ್ದು,ದಿನಾಂಕ: 09.05.2016 ರಂದು ಅರ್ಜಿದಾರನು ಬೆಂಗಳೂರಿಗೆ ಬಂದಾಗ, ಆತನಲ್ಲಿ ಆಕೆಯು ಮಗುವಿನ ಬಗ್ಗೆ ವಿಚಾರಿಸಿದಾಗ ಆ ಸಮಯದಲ್ಲಿ ಆತನು ಮಗುವು ೧ ಬೆಳಗಾವಿಯಲ್ಲಿ ಇರುವುದಾಗಿ ಹೇಳಿದ್ದು, ತಾನು ಬೆಂಗಳೂರನ್ನು ತೊರೆದಿರುವುದು ಬೆಳಗಾವಿಯಲ್ಲಿ ಖಾಯಂ ಆಗಿ ವಾಸಿಸಲು ಎಂದು ಹೇಳಿರುತ್ತಾನೆ.ಅರ್ಜಿದಾರನು ಮಗುವನ್ನು ಆಕೆಯ ಅಭಿರಕ್ಷೆಯಿಂದ ಮೋಸದಿಂದ ಕರೆದುಕೊಂಡು ಹೋಗಿದ್ದರಿಂದ, ಆಕೆಯುದಿನಾಂಕ: 10.5.2016 ರಂದು ಪೊಲೀಸರಿಗೆ ದೂರನ್ನು ನೀಡಿ ಅರ್ಜಿದಾರನು ವಾಸ್ತವವಾಗಿ ಮಗುವನ್ನು ಅಪಹರಿಸಿದ್ದಾನೆ ಎಂದು ಆಕೆಯು ಹೇಳಿಕೆ ನೀಡಿರುತ್ತಾಳೆ.ವಿವಾಹದ ನಂತರ, ಮೊದಲ ದಿನದಿಂದಲೂ ಅರ್ಜಿದಾರನು ತನ್ನೆಡೆಗೆ ಹೊಂದಿದ್ದ ವಿರೋಧ ಮನೋಭಾವ ಮತ್ತು ನಡವಳಿಕೆಯನ್ನು ಗಮನಿಸಿ ಅಂತಹ ವ್ಯಕ್ತಿಯೊಂದಿಗೆ ಜೀವನ ನಡೆಸುವುದು ತನ್ನ ಮತ್ತು ತನ್ನ ಮಗುವಿನ ಹಿತಾಸಕ್ತಿಗೆ ಹಾನಿಕಾರಕವಾಗುತ್ತದೆ ಎಂದು ಆಕೆಯು ನಿರ್ಧರಿಸಿದ್ದರಿಂದ, ಆಗಸ್ಟ್ ತಿಂಗಳ 2016 ರಂದು ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಅಪ್ರಾಪ್ತ ಮಗುವನ್ನು ಅಭಿರಕ್ಷೆಗೆ ಪಡೆಯುವ ಸಲುವಾಗಿ ಮತ್ತೊಂದು ವ್ಯವಹರಣೆಯನ್ನೂ ಸಹ ಪ್ರಾರಂಭಿಸಿರುತ್ತಾಳೆ.

5. ಅರ್ಜಿದಾರನ ಮತ್ತು ಪ್ರತ್ಯರ್ಜಿದಾರಳ ಪರವಾಗಿ ವಾದ ಮಂಡಿಸಿದ ಮಾನ್ಯ ವಕೀಲರುಗಳ ವಾದಗಳನ್ನು ನಾವು ಆಲಿಸಿರುತ್ತೇವೆ.

6. ಅರ್ಜಿದಾರನ ಪರ ಮಾನ್ಯ ವಕೀಲರು ವಾದಿಸುವುದೇನೆಂದರೆ, ಬೆಳಗಾವಿಯ ನ್ಯಾಯಾಲಯಕ್ಕೆ ಮಗುವಿನ ಅಭಿರಕ್ಷೆಯನ್ನು ತೀರ್ಮಾನಿಸುವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿರುತ್ತದೆ ಎಂಬುದಾಗಿದೆ.ಮಗುವು ಪ್ರಸ್ತುತದಲ್ಲಿ ತನ್ನ ತಂದೆ ಹಾಗೂ ತಾತ, ಅಜ್ಜಿಯೊಂದಿಗೆ ವಾಸವಿರುವ ಸ್ಥಳವು ಬೆಳಗಾವಿಯಾಗಿದ್ದು ಅರ್ಜಿದಾರನು ಮಗುವನ್ನು ಬೆಳಗಾವಿಯಲ್ಲಿನ ಶಾಲೆಗೆ ಸೇರಿಸಿದ್ದು, ಮಗುವು ಸಾಮಾನ್ಯವಾಗಿ ನೆಲಸಿರುವ ಸ್ಥಳವು ಬೆಳಗಾವಿಯಾಗಿರುತ್ತದೆ.ಅರ್ಜಿದಾರನ ಪರವಾಗಿರುವ ಮಾನ್ಯ ವಕೀಲರು, ಪಾಲಕತ್ವ ಮತ್ತು ಪ್ರತಿಪಾಲಿತರ ಅಧಿನಿಯಮ, 1890 (ಸಂಕ್ಷಿಪ್ತತೆಗಾಗಿ ' ಅಧಿನಿಯಮ) 9 ನೇ ಪ್ರಕರಣವನ್ನು ಉಲ್ಲೇಖಿಸುತ್ತಾ ವಾದ ಮಂಡಿಸುವುದೇನೆಂದರೆ, ಮಗುವಿನ ಅಭಿರಕ್ಷೆಯ ಬಗ್ಗೆ ತೀರ್ಮಾನಿಸುವ ಅಧಿಕಾರ ವ್ಯಾಪ್ತಿಯು ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಕ್ಕೆ ಇರುವುದಿಲ್ಲ ಎಂಬುದಾಗಿದೆ.ಅರ್ಜಿದಾರಳು ಮಗುವಿನ

ಅಭಿರಕ್ಷೆಗಾಗಿ ಬೆಂಗಳೂರಿನಲ್ಲಿ ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯವು ವ್ಯವಹರಣೆಯ ದಾಖಲೆ ಪತ್ರದಲ್ಲಿ ಟಿಪ್ಪಣಿ ಮಾಡಿ, ಮಗುವು ತನ್ನ ತಂದೆಯೊಂದಿಗೆ ಬೆಳಗಾವಿಯಲ್ಲಿ ವಾಸವಾಗಿರುತ್ತದೆ ಎಂಬ ಆಕ್ಷೇಪಣೆಯನ್ನು ಎತ್ತಿರುತ್ತದೆ ಎಂದೂ ಸಹ ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ.ಆದ್ದರಿಂದ, ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯವು, ಎತ್ತಲಾದ ಆಕ್ಷೇಪಣೆಯು ಸ್ಪಷ್ಟವಾಗಿ ತೋರ್ಪಡಿಸುವುದೇನೆಂದರೆ, ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಕ್ಕೆ ಇದನ್ನು ತೀರ್ಮಾನಿಸಲು ಯಾವುದೇ ಅಧಿಕಾರ ವ್ಯಾಪ್ತಿಯಿರುವುದಿಲ್ಲ ಎಂಬುದಾಗಿದೆ.ಆದ್ದರಿಂದ, ಸದರಿ ನ್ಯಾಯಾಲಯವು, ಅಧಿಕಾರ ವ್ಯಾಪ್ತಿಯ ಅಂಶದ ಬಗ್ಗೆ ಮೊದಲು ತೀರ್ಮಾನ ತೆಗೆದುಕೊಳ್ಳಬೇಕು.ಬದಲಾಗಿ, ಜಿ ಮತ್ತು ಡಬ್ಲ್ಯೂ.ಸಿ ವ್ಯವಹರಣೆಯಲ್ಲಿ, ನ್ಯಾಯಾಲಯವು ಪ್ರತ್ಯರ್ಜಿದಾರಳನ್ನು ಅಂದರೆ ಇದರಲ್ಲಿ ಅರ್ಜಿದಾರನನ್ನು ಮಗುವನ್ನು ಕರೆತರಲು ನಿರ್ದೇಶಿಸಿರುತ್ತದೆ.ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯ ಪ್ರಶ್ನೆಯನ್ನು ನಿರ್ಧರಿಸದೆ ಮುಂದುವರಿಯಬಾರದಾದ್ದರಿಂದ ಅರ್ಜಿದಾರನು ವರ್ಗಾವಣೆ ಅರ್ಜಿಯನ್ನು ಸಲ್ಲಿಸಲು ನಿರ್ಬಂಧಕ್ಕೊಳಪಟ್ಟಿರುತ್ತಾನೆ.ತನ್ನ ವಾದಕ್ಕೆ ಬೆಂಬಲವಾಗಿ, ಮಾನ್ಯ ವಕೀಲರು ಈ ಕೆಳಗಿನ ತೀರ್ಪುಗಳ ಮೇಲೆ ಅವಲಂಬಿತರಾಗಿರುತ್ತದೆ:

(i) ರುಚಿ ಮಜೂ -ವಿರುದ್ಧ ಸಂಜೀವ್ ಮಜೂ [ (2011) 6 ಎಸ್ಸಿಸಿ 479]

(ii) ಅಪರ್ಣ ಬ್ಯಾನರ್ಜಿ –ವಿರುದ್ಧ – ತಪನ್ ಬ್ಯಾನರ್ಜಿ [ಎಐಆರ್ 1986 ಪಿ ಮತ್ತು ಎಚ್ 113]

(iii) ಗಿಯೋವನ್ನಿ ಮ್ಯಾಕ್ರೋ ಮಜ್ಜು ಮತ್ತು ಇತ್ಯಾದಿ [ಎಐಆರ್ 1983 ಬಿಒಎಂ 242]

7. ಮತ್ತೊಂದೆಡೆ, ಪ್ರತ್ಯರ್ಜಿದಾರಳ ಪರ ಮಾನ್ಯ ವಕೀಲರು ವಾದ ಮಂಡಿಸುವುದೇನೆಂದರೆ, ಬೆಂಗಳೂರಿನಿಂದ ಬೆಳಗಾವಿಗೆ ಸ್ಥಳಾಂತರಗೊಳ್ಳಲು ಯಾವುದೇ ಪರಸ್ಪರ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ ಎಂಬುದಾಗಿದೆ.ಬೆಂಗಳೂರಿನಲ್ಲಿಯೇ ತಮಗೆ ಉತ್ತಮ ಭವಿಷ್ಯದ ನಿರೀಕ್ಷಣೆಗಳು ದೊರಕುತ್ತದೆ ಎಂಬುದು ಪ್ರತ್ಯರ್ಜಿದಾರಳ ಅಭಿಪ್ರಾಯವಾಗಿದ್ದು, ಆಕೆಯು ತನ್ನ ಪತಿಯೊಂದಿಗೆ ಬೆಳಗಾವಿಗೆ ಹೋಗಲು ಸಮ್ಮತಿ ನೀಡಿರುವುದಿಲ್ಲ.ಅರ್ಜಿದಾರ ಮತ್ತು ಪ್ರತ್ಯರ್ಜಿದಾರಳು ಬೆಂಗಳೂರಿನಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ವಾಸವಿದ್ದು, ಆ ಸಮಯದಲ್ಲಿ ಮಗುವು ತಮ್ಮೊಂದಿಗಿರುತ್ತದೆ.ಆದ್ದರಿಂದ, ಮಗುವಿನ ಸಾಮಾನ್ಯ ವಾಸಸ್ಥಳವು ಬೆಂಗಳೂರಾಗಿರುತ್ತದೆಯೇ ಹೊರತು ಬೆಳಗಾವಿಯಲ್ಲ ಎಂಬುದು ಪತ್ಯರ್ಜಿದಾರಳ ಪರ ಮಾನ್ಯ ವಕೀಲರ ವಾದವಾಗಿರುತ್ತದೆ.ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯವು ಅರ್ಜಿದಾರನಿಗೆ ಪತಿಗೆ ಮಗುವನ್ನು ಹಾಜರುಪಡಿಸಲು ನಿರ್ದೇಶಿಸಿದ್ದು, ಆ ನಿರ್ದೇಶನವು ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಅಂಶದ ಬಗ್ಗೆ ಒಂದು ತೀರ್ಮಾನಕ್ಕೆ ಬರುವ ಉದ್ದೇಶದಿಂದ ನೀಡಿದ್ದಾಗಿದ್ದು ಅದು ೧ ಯಾವುದೇ ಮಧ್ಯಂತರ ಆದೇಶವಾಗಿರುವುದಿಲ್ಲ.ಮಾನ್ಯ ವಕೀಲರು ಮುಂದುವರೆದು ವಾದಿಸುವುದೇನೆಂದರೆ, ಕೌಟುಂಬಿಕ ನ್ಯಾಯಾಲಯ, ಬೆಂಗಳೂರು, ಅಧಿಕಾರ ವ್ಯಾಪ್ತಿಯ ಪ್ರಶ್ನೆಯನ್ನು ತೀರ್ಮಾನಿಸಬೇಕಾಗುತ್ತದೆ ಮತ್ತು ಆ ಉದ್ದೇಶಕ್ಕಾಗಿ ವಿಚಾರಣೆಯ ಅಗತ್ಯವಿದೆ ಎಂಬುದಾಗಿದೆ.ಅಭಿರಕ್ಷೆ ಎ ವ್ಯವಹರಣೆಯನ್ನು ಬಾಕಿಯಿರುವ ನ್ಯಾಯಾಲಯದಲ್ಲಿ ಮಾತ್ರ ವಿಚಾರಣೆ ನಡೆಸಬಹುದಾಗಿದ್ದು, ವರ್ಗಾವಣೆ ಅರ್ಜಿಯಲ್ಲಿ ಈ ನ್ಯಾಯಾಲಯವು ಆ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದಿಲ್ಲ. 'ಸಾಮಾನ್ಯವಾಗಿ ವಾಸಿಸುವುದು ಇದರ ಪರಿಭಾಷೆಯು ಕಾನೂನಿನ ಮತ್ತು ಸಂಗತಿಯ ಮಿಶ್ರಿತ ಪ್ರಶ್ನೆಯಾಗಿದ್ದು, ಈ ಕಾರಣದಿಂದ ರುಚಿ ಮಜೂ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದಂತೆ ವಿಚಾರಣೆ ಅಗತ್ಯವಿದ್ದು, ಈ ಅಭಿರಕ್ಷೆ

ವ್ಯವಹರಣೆಯನ್ನು ಬೆಂಗಳೂರಿನಿಂದ ಬೆಳಗಾವಿಗೆ ವರ್ಗಾಯಿಸಲು ಸಾಧ್ಯವಿಲ್ಲವೆಂದು ಪ್ರತ್ಯರ್ಜಿದಾರಳ ಪರ ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ.

8. ಉಭಯ ವಕೀಲರುಗಳ ವಾದವನ್ನು, ಆಲಿಸಿದ ನಂತರ ಸ್ಪಷ್ಟವಾಗುವ ಅಂಶವೇನೆಂದರೆ, ಉಭಯ ವಕೀಲರುಗಳು ರುಚಿ ಮಜೂ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಮೇಲೆ ಮುಖ್ಯವಾಗಿ ಅವಲಂಬಿತರಾಗಿದ್ದಾರೆ ಮತ್ತು ಸಂಪೂರ್ಣ ಪ್ರಕರಣವು, ಅಧಿನಿಯಮದ 9 ನೇ ಪ್ರಕರಣದಲ್ಲಿ ಕಂಡುಬಂದಂತಹ ' ಸಾಮಾನ್ಯವಾಗಿ ವಾಸಿಸುವ ಪದಾವಳಿಯ ವ್ಯಾಖ್ಯಾನದ ಮೇಲೆ ಅವಲಂಬಿತವಾಗಿರುತ್ತದೆ ಎಂಬುದಾಗಿದೆ.

9. ಪ್ರಸ್ತುತ, ಮಗುವು ತನ್ನ ತಂದೆಯೊಂದಿಗೆ ಬೆಳಗಾವಿಯಲ್ಲಿ ವಾಸವಾಗಿರುತ್ತದೆ ಎಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.ಬೆಳಗಾವಿಯನ್ನು ಮಗುವಿನ ಸಾಮಾನ್ಯ ವಾಸಸ್ಥಳವೆಂದು ಪರಿಗಣಿಸಬೇಕೇ ಎಂಬುದೇ ಪ್ರಶ್ನೆಯಾಗಿರುತ್ತದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ರುಚಿ ಮಜೂ ಪ್ರಕರಣದಲ್ಲಿ, ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತದೆ:

" ಅಧಿನಿಯಮದ 9 ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ನಿರ್ಣಯಿಸುವುದಕ್ಕೆ ಏಕೈಕ ಪರೀಕ್ಷೆಯು ಅಪ್ರಾಪ್ತಯ ' ಸಾಮಾನ್ಯ ವಾಸಕ್ಕೆ ಸಂಬಂಧಿಸಿದುದಾಗಿರುತ್ತದೆ ಎಂಬುದು ಮೇಲಿನದನ್ನು ಓದುವುದರಿಂದಲೇ ಸ್ಪಷ್ಟವಾಗುತ್ತದೆ.ಅಪ್ರಾಪ್ತಯು ಎಲ್ಲಿ ಸಾಮಾನ್ಯವಾಗಿ ವಾಸಿಸುತ್ತಾರೆ ' ಎಂಬ ಪದಾವಳಿಯನ್ನು ಉಪಯೋಗಿಸಲಾಗಿರುತ್ತದೆ.ಅಪ್ರಾಪ್ತಯು ಈಗ ನಿರ್ದಿಷ್ಟ ಸ್ಥಳದಲ್ಲಿ ಸಾಮಾನ್ಯವಾಗಿ ವಾಸವಾಗಿರುವರೇ ಎಂಬುದು ಮೂಲ ಉದ್ದೇಶದ ಪ್ರಶ್ನೆಯಾಗಿದ್ದು, ಪ್ರತಿಯಾಗಿ ಅದೊಂದು ಸಂಗತಿಯ ಪ್ರಶ್ನೆಯಾಗಿರುತ್ತದೆ.ಅದು ಕಾನೂನಿನ ಮತ್ತು ಸಂಗತಿಯ ಮಿಶ್ರಿತ ಪ್ರಶ್ನೆಯೂ ಆಗಿರಬಹುದು.ಆದರೆ, ಅಧಿಕಾರ ವ್ಯಾಪ್ತಿಯ ಸಂಗತಿಯನ್ನು ಅಂಗೀಕರಿಸಿದ ಹೊರತು ಮತ್ತು ವಿವಾದದ ವಾಸ್ತವಿಕ ಅಂಶಗಳನ್ನು ವಿಚಾರಣೆ ನಡೆಸದೆ ಉತ್ತರಿಸುವ ಸಾಮರ್ಥ್ಯವಿಲ್ಲದ ಹೊರತು ಅದು ಸಂಪೂರ್ಣವಾದ ಕಾನೂನಿನ ಪ್ರಶ್ನೆಯಾಗಲಾರದು.ಈ ಪ್ರಸ್ತುತ ಪ್ರಕರಣದಲ್ಲಿ, ಅಧಿಕಾರ ವ್ಯಾಪ್ತಿಯ ಪ್ರಶ್ನೆಗೆ ಸಂಬಂಧಪಟ್ಟ ವಾಸ್ತವಿಕ ಅಂಶಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ.ಆ ಅಂಶಗಳಲ್ಲಿ ಗಂಭೀರವಾದ ವಿವಾದಗಳಿದ್ದು, ನಾವು ಅದನ್ನು ಪ್ರಸ್ತುತ ಪರಾಮರ್ಶಿಸಬೇಕು.ಹಾಗೆ ಮಾಡುವ ಮುನ್ನ, 9 ( 1) ನೇ ಪ್ರಕರಣದಲ್ಲಿರುವಂಥ ಮೇಲೆ ಹೇಳಿದ ಸಾಮಾನ್ಯ ವಾಸ ಎಂಬ ಪದಾವಳಿಯ ನಿಜವಾದ ಉದ್ದೇಶವನ್ನು ಪರಿಶೀಲಿಸಬಹುದು.ಈ ಪದಾವಳಿಯನ್ನು ವಿವಿಧ ಸಂದರ್ಭ ಮತ್ತು ಶಾಸನಗಳಲ್ಲಿ ಉಪಯೋಗಿಸಿದ್ದು, ಸಾಮಾನ್ಯವಾಗಿ ಅನೇಕ ಬಾರಿ ವ್ಯಾಖ್ಯಾನಕ್ಕೂ ಬಂದಿರುತ್ತದೆ.ವಾಚ್ಯಾರ್ಥ ವ್ಯಾಖ್ಯಾನವು ವ್ಯಾಖ್ಯಾನದ ಮೊಟ್ಟ ಮೊದಲ ಹಾಗೂ ಪ್ರಧಾನ ನಿಯಮವಾಗಿರುವುದರಿಂದ, ಪದಾವಳಿಯಲ್ಲಿ ಒಳಗೊಂಡಂತಹ ಎರಡು ಪದಗಳ ವಾಚ್ಯಾರ್ಥವನ್ನು ಅರ್ಥಮಾಡಿಕೊಳ್ಳುವುದು ಉಪಯುಕ್ತವಾಗಿರುತ್ತದೆ.ಬ್ಲಾಕ್ಸ್ ಲಾ ಡಿಕ್ಷನರಿಯು ' ಆರ್ಡಿನರಿ ಎಂಬ ಪದವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸುತ್ತದೆ:

" ಆರ್ಡಿನರಿ ನಿಯತ, ಸಾಮಾನ್ಯ, ಸಾಧಾರಣ, ಆಗಾಗ್ಗೆ ಮರುಕಳಿಸುವ, ಸುಸ್ಥಾಪಿತ ಆದೇಶದ ಪ್ರಕಾರ, ನೆಲೆಸಿದ, ವಾಡಿಕೆಯ, ಯುಕ್ತವಾದ, ಅಪರೂಪದ ಅಥವಾ ವಿಚಿತ್ರ ಸಂದರ್ಭಗಳಿಂದ ನಿರೂಪಿಸಿರದ, ಸೇರಿದ, ಬಳಸಿದ, ಅಥವಾ ಗುಣಲಕ್ಷಣಗಳುಳ್ಳ, ಸಹಜ ಅಥವಾ ಸಾಧಾರಣ ವ್ಯಕ್ತಿ.

ಅದೇ ರೀತಿ, ' ರಿಸೈಡ್ ' ಎಂಬ ಪದವನ್ನು ಈ ಕೆಳಗಿನಂತೆ ವಿವರಿಸಲಾಗಿದೆ:

`ರಿಸೈಡ್-ಜೀವಿಸು, ವಾಸಿಸು, ನೆಲೆಸು, ವಸತಿ, ವಸತಿ ಹೂಡು, ವಾಸ, ಉಳಿದಿಕೊ (ವೆಸ್ಟರ್ನ್ ನ್ಯಾಪ್ ಎಂಜಿನಿಯರಿಂಗ್ ಕೊ.ವಿ. ಗಿಲ್ಡ್ ಬ್ಯಾಂಕ್, ಸಿಸಿಎ ಕಾಲ್ 129 ಎಫ್ 2 ಡಿ 135, 136) ತಾನು ಅಥವಾ ವಸ್ತುವು ಒಂದು ಸ್ಥಳದಲ್ಲಿ ನೆಲೆಗೊಳ್ಳುವುದು, ಬೀಡುಬಿಟ್ಟಿರುವಿಕೆ, ವಾಸ ಅಥವಾ ಉಳಿದುಕೊಳ್ಳಲು, ಶಾಶ್ವತವಾಗಿ ಅಥವಾ ನಿರಂತರವಾಗಿ ವಾಸಿಸುವುದು.ಅಲ್ಪಾವಧಿಯ ನಿಶ್ಚಲ ವಾಸಸ್ಥಾನವಿರುವುದು, ನಿವಾಸ ಅಥವಾ ಮನೆ ಹೊಂದಿರುವುದು; ನಿರ್ದಿಷ್ಟವಾಗಿ ನಿವಾಸವಿರುವುದು, ಶಾಶ್ವತ ಸ್ಥಳವಿರುವುದು, ಒಂದು ಭಾಗವಾಗಿ ಉಪಸ್ಥಿತವಿರುವುದು, ವೈಶಿಷ್ಟ್ಯತೆಯನ್ನು ಒಳಗೊಂಡಿರುವುದು, ಹಕ್ಕುಳ್ಳದ್ದು.(ಸ್ಟೇಟ್ ಎಕ್ಸ್. ರೆಲ್. ಚೌಡೆನ್ -ವಿರುದ್ಧ-ಜೆನ್ನೈನ್ ಮಾ. 395.ಎಸ್.ಡಬ್ಲ್ಯೂ 2 ಡಿ 343, 249)

` ರಿಸೈಡ್ ' ಎಂಬ ಪದಕ್ಕೆ ವೆಬ್ಸ್ಟರ್ ನಿಘಂಟಿನಲ್ಲೂ ಸಹ ಅದೇ ರೀತಿಯ ಅರ್ಥ ದೊರೆತಿದ್ದು, ಅದರ ಉದ್ಧೃತ ಭಾಗವು ಹೀಗಿದೆ:

“1. 1.ಗಣನೀಯವಾದ ಸಮಯದವರೆಗೆ ವಾಸಿಸುವುದು, ತಮ್ಮದೇ ನಿವಾಸವಿರುವುದು; ಜೀವಿಸು.

2. ಗುಣವಿಶೇಷತೆ ಅಥವಾ ವೈಶಿಷ್ಟ್ಯಪೂರ್ಣತೆಯಿಂದ ಜೀವಿಸುವುದು.

3. ಸ್ವ-ಹಿತಾಸಕ್ತಿಯಿಂದ; ಮುಂಚಿತವಾಗಿ.”

10. ಇದೇ ತೀರ್ಪಿನಲ್ಲಿ, ' ಸಾಮಾನ್ಯವಾಗಿ ವಾಸಿಸು ' ಎಂಬ ಪದದ ಅರ್ಥವನ್ನು ಪಡೆದುಕೊಳ್ಳುವುದಕ್ಕೋಸ್ಕರ, ಕುಲದೀಪ್ ನಯ್ಯರ್ ಮತ್ತು ಇತರರು -ವಿರುದ್ಧ ಯೂನಿಯನ್ ಆಫ್ ಇಂಡಿಯಾ 2006 ( 7) ಎಸ್ಸಿಸಿ 1, ಪ್ರಕರಣದಲ್ಲಿನ ಮತ್ತೊಂದು ತೀರ್ಪನ್ನು ಉಲ್ಲೇಖಿಸಲಾಗಿರುತ್ತದೆ.ಅದು ಈ ಕೆಳಗಿನಂತಿದೆ:

“243. ಸಿಕ್ಯೂಟಿ -ವಿರುದ್ಧ ಸಫೋಕ್ ಕೌಂಟಿ ಕೌನ್ಸಿಲ್ (1980) 3 ಆಲ್ಇಆರ್ 689 ಅನ್ನು ಲೆಕ್ಸಿಕಾನ್ ಉಲ್ಲೇಖಿಸಿದ್ದು, “ ಸಾಮಾನ್ಯ ' ಎಂಬ ಪದವು ಮೂಲತಃ ಉದ್ದೇಶಕ್ಕೆ ನಿರ್ದೇಶಿತವಾಗಿರುತ್ತದೆ ಮತ್ತು ಸಮಯಕ್ಕಲ್ಲ.ಈ ಅರ್ಥದಲ್ಲಿ, ಸಾಮಾನ್ಯವಾಗಿ ಎಂಬ ಪದವು ಒಬ್ಬ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ರೂಢಿಯಲ್ಲಿ ಮತ್ತು ನಿರಂತರತೆಯ ಸ್ವಲ್ಪಮಟ್ಟಿನ ಅಂಶದ ಜೊತೆಗೆ ಎಲ್ಲಿ ಕಂಡು ಬರುತ್ತಾನೆ ಎಂಬುದು ಪ್ರಶ್ನೆಯಾಗಿರುವುದಿಲ್ಲ.ಆದರೆ, ಕೇವಲ ಕೆಲವು ವಿಶೇಷ ಅಥವಾ ಸೀಮಿತ ಉದ್ದೇಶದ ಬದಲಿಗೆ ವಾಸಿಸುವ ವೈಶಿಷ್ಟ್ಯವು ' ಸಾಮಾನ್ಯ ' ಅಥವಾ ' ಸಾಧಾರಣವೇ ' ಆಗಿರುತ್ತದೆ.

244. ' ಸಾಮಾನ್ಯವಾಗಿ ' ಮತ್ತು ' ವಾಸಿಸುವ ' ಎಂಬ ಎರಡು ಪದಗಳನ್ನು ಇನ್ನಿತರೆ ಶಾಸನಬದ್ಧ ಉಪಬಂಧಗಳಲ್ಲಿಯೂ ಸಹ ಒಟ್ಟಿಗೆ ಉಪಯೋಗಿಸಲಾಗಿರುತ್ತದೆ ಮತ್ತು ಲಾ ಲೆಕ್ಸಿಕನ್ ಪ್ರಕಾರ, ಒಬ್ಬ ಬ ವ್ಯಕ್ತಿಯು ಒಂದು ನಿರ್ದಿಷ್ಟ ಸ್ಥಳದಲ್ಲಿ ಯಾವಾಗಲೂ ನೆಲೆಸುವ ಅಥವಾ ವ್ಯಾಪಾರ ಮಾಡುವ ಅಗತ್ಯವಿರುವುದಿಲ್ಲ ಎಂಬುದಾಗಿ ಎರಡೂ ಪದಗಳಿಗೆ ಅರ್ಥೈಸಿದೆ ”.

11. ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ದೃಷ್ಟಿಯಲ್ಲಿ, ಚ ' ಸಾಮಾನ್ಯವಾಗಿ ವಾಸಿಸುವ ' ಎಂಬ ಪದಾವಳಿಯನ್ನು ವಿಸ್ತರಿಸುವುದಾದರೆ, ಅದು ಹಿಂದಿನ ನಿವಾಸವನ್ನು ಸೂಚಿಸುವುದಿಲ್ಲ ಎಂದು ಹೇಳಬಹುದಾಗಿರುತ್ತದೆ. ಸಾಮಾನ್ಯವಾಗಿ ' ವಾಸಿಸು ' ಎಂಬ ಕ್ರಿಯಾಪದದ ವಿಶೇಷತೆಯನ್ನು ತಿಳಿಸುವ ಕ್ರಿಯಾ ವಿಶೇಷಣವು ಒಂದು ಸಾಮಾನ್ಯ ಮತ್ತು ಸಹಜ ಅರ್ಥವನ್ನು ನೀಡುತ್ತದೆ.ಅದೇನೆಂದರೆ, ಒಬ್ಬ ವ್ಯಕ್ತಿಯು

ಆತನ ಕೆಲಸ ಅಥವಾ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಶಾಶ್ವತವಾಗಿರದಿಲ್ಲದಿದ್ದರೂ, ಕೆಲವು ವರ್ಷಗಳ ಕಾಲ ಅಲ್ಲಿಯೇ ವಾಸ ಮಾಡುವ ಉದ್ದೇಶದಿಂದ ಒಂದು ನಿರ್ದಿಷ್ಟ ಸ್ಥಳದ ನಿವಾಸಿಯಾಗಿರಬೇಕು ಎಂಬುದಾಗಿದೆ.ಒಂದು ವೇಳೆ, ಶಾಲೆಗೆ ಹೋಗುವಂತಹ ಮಗುವಿದ್ದ ಸಂದರ್ಭದಲ್ಲಿ, ಅದು ಯಾವ ಸ್ಥಳದಲ್ಲಿ ವಸತಿ ಶಾಲೆಗೆ ಹೋಗುತ್ತದೆ ಆ ಸ್ಥಳವೇ ಮಗುವಿನ ಸಾಮಾನ್ಯ ವಾಸಸ್ಥಳವಾಗಿರುತ್ತದೆ ಮತ್ತು ಅಂತಹ ಸಂದರ್ಭದಲ್ಲಿ ಪೋಷಕರು ಎಲ್ಲಿ ವಾಸಿಸುವರೋ ಅದುವೇ ಮಗುವಿನ ಸಾಮಾನ್ಯ ವಾಸಸ್ಥಳ ಮಗುವು ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೆ ಎಂಬುದರ ಅರ್ಥವನ್ನು ಸಂಕುಚಿತಗೊಳಿಸಲಾಗುವುದಿಲ್ಲ ಅಂಥ ಸಂದರ್ಭದ ಪೋಷಕರು ವಾಸಮಾಡುವ ಸ್ಥಳವು ಅದರ ಸಾಮಾನ್ಯ ಸ್ಥಳವಾಗಿರುತ್ತದೆ. 'ನಿವಾಸ ' ಎಂಬುದು ಒಬ್ಬರು ಒಂದು ಮನೆಯಲ್ಲಿ ವಾಸಿಸುವುದನ್ನು ಸೂಚಿಸುತ್ತದೆ ಮತ್ತು ಆ ಮನೆಯು ಸ್ವಂತದ್ದಾಗಿರಬಹುದು ಅಥವಾ ಬಾಡಿಗೆಯದ್ದಾಗಿರಬಹುದು.ಒಬ್ಬ ವ್ಯಕ್ತಿಯು ಒಂದು ಸ್ಥಳದಲ್ಲಿ ವಾಸವಾಗಿದ್ದರೆ, ಆ ಸ್ಥಳವನ್ನು ತನ್ನ ವಾಸಸ್ಥಳವಾಗಿ ಭಾವಿಸುವ ಮೂಲಕ ಆ ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವ ಉದ್ದೇಶವನ್ನು ಹೊಂದಿರುತ್ತಾನೆ ಎಂಬ ಅರ್ಥವನ್ನು ನಿಸ್ಸಂದೇಹವಾಗಿ ಸೂಚಿಸುತ್ತದೆ ಮತ್ತು ಆ ಸ್ಥಳವು ಒಬ್ಬ ವ್ಯಕ್ತಿಯ ವ್ಯಾಪಾರ ಉದ್ಯೋಗ ಇತ್ಯಾದಿಗಳೊಂದಿಗೆ ಸಂಬಂಧವನ್ನೂ ಸಹಾ ಹೊಂದಿರುತ್ತದೆ.ಅರ್ಜಿದಾರನ ಮಗನ ಮತ್ತು ಪ್ರತ್ಯರ್ಜಿದಾರಳ ಸಾಮಾನ್ಯ ವಾಸ ಸ್ಥಳವು ಇಲ್ಲಿ ಬೆಳಗಾವಿಯೇ ಆಗಿರುತ್ತದೆ ಎಂಬುದನ್ನು ಈ ಅರ್ಥವು ಒದಗಿಸುತ್ತದೆ.ಪ್ರತ್ಯರ್ಜಿದಾರಳ ಪರವಾಗಿ ಮಾನ್ಯ ವಕೀಲರು ಮಂಡಿಸಿದ ವಾದದಂತೆಯೇ, ರುಚಿ ಮಜೂ ಪ್ರಕರಣದಲ್ಲಿರುವಂತೆ, ವಿಚಾರಣೆಯನ್ನು ನಡೆಸಬೇಕಾಗಿರುತ್ತದೆ ಎಂಬುದು ಸತ್ಯವಾಗಿರುತ್ತದೆ.ಆದರೆ, ಇಲ್ಲಿ ಮಗುವಿನ ಅಭಿರಕ್ಷೆಗೆ ಅರ್ಜಿಯನ್ನು ಸಲ್ಲಿಸಿರುವಲ್ಲಿ ನ್ಯಾಯಾಲಯವು ಉದ್ದೇಶಿಸಿದ ವಿಚಾರಣೆ ಮಾಡಲಾಗಿದೆ ಎಂಬುದಾಗಿದೆ.ವರ್ಗಾವಣೆಯ ಅರ್ಜಿಯನ್ನು ಸಲ್ಲಿಸದೆ, ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸಿದರೆ, ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯಿದೆಯೇ ಇಲ್ಲವೇ ಎಂಬ ನಿರ್ಣಯಕ್ಕೆ ಬರಲು ಸದರಿ ನ್ಯಾಯಾಲಯವು ಒಂದು ವಿಚಾರಣೆಯನ್ನು ನಡೆಸಬೇಕಿತ್ತು ಎಂಬುದನ್ನು ಹೇಳಬಹುದಾಗಿದೆ.ಆದರೆ ಈ ವಿವಾದಾಂಶವನ್ನು ವರ್ಗಾವಣೆ ಅರ್ಜಿಯಲ್ಲಿ ಎತ್ತಿರುವುದರಿಂದ, ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಈ ನ್ಯಾಯಾಲಯವು ತೀರ್ಮಾನ ತೆಗೆದುಕೊಳ್ಳಬಹುದು.

12. ಮಗುವು ಪ್ರಸ್ತುತ ಬೆಳಗಾವಿಯಲ್ಲಿ ತನ್ನ ತಂದೆಯೊಂದಿಗೆ ವಾಸವಾಗಿರುತ್ತದೆ ಎಂಬುದು ಒಪ್ಪಿಕೊಳ್ಳಲಾದ ಸಂಗತಿಯಾಗಿರುತ್ತದೆ.ಪ್ರತ್ಯರ್ಜಿದಾರಳು ಬೆಂಗಳೂರಿನಲ್ಲಿ ಒಂದು ಪಿ.ಜಿ.ಯಲ್ಲಿ ವಾಸವಾಗಿರುತ್ತಾಳೆ ಎಂದು ಅರ್ಜಿದಾರನು ಹೇಳಿಕೆ ನೀಡಿರುತ್ತಾನೆ.ಪ್ರತ್ಯರ್ಜಿದಾರಳು ಒಂದು ದಸ್ತಾವೇಜನ್ನು, ಅಂದರೆದಿನಾಂಕ: 21.06.2017 ರಲ್ಲಿ ಆದ ಮನೆ ಬಾಡಿಗೆ ಒಪ್ಪಂದದ ಪ್ರತಿಯನ್ನು ಹಾಜರುಪಡಿಸಿದ್ದು, ಅದು ಆಕೆಯು ತನ್ನ ವಾಸಕ್ಕೆ ಒಂದು ಮನೆಯನ್ನು ಬಾಡಿಗೆಗೆ ಪಡೆದುಕೊಂಡಿರುವುದನ್ನು ತೋರಿಸುತ್ತದೆ.ಬಹುಶಃ ಆಕೆಯು ಈ ದಸ್ತಾವೇಜನ್ನು ಹಾಜರುಪಡಿಸಿರುವುದು, ಆಕೆಯು ಪಿ.ಜಿ.ಯಲ್ಲಿ ವಾಸಿಸುವುದಿಲ್ಲ ಎಂದು ಪ್ರತಿಪಾದಿಸುವುದಕ್ಕಾಗಿ ಇರಬಹುದು.ಆಕೆಯು ಮತ್ತೊಂದು ದಸ್ತಾವೇಜನ್ನು ಅಂದರೆ, ಉದ್ಯೋಗದ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು, ಅದು ಆಕೆಯು ಡೆಂಟಲ್ ಮತ್ತು ಅರ್ಥೋಡೆಂಟಿಕ್ ಕ್ಲಿನಿಕ್ನಲ್ಲಿ ಪ್ರತಿ ತಿಂಗಳಿಗೆ 50,000/- ರೂ. ಸಂಬಳಕ್ಕೆ ಕೆಲಸ ಮಾಡುತ್ತಿರುವುದನ್ನು ತೋರಿಸುತ್ತದೆ.ಆದರೆ ಈ ಎಲ್ಲಾ ದಸ್ತಾವೇಜುಗಳು, ವಿಶೇಷವಾಗಿ ಬಾಡಿಗೆ ಟಿಪ್ಪಣಿಯಾಗಿದ್ದು, ಜಿ ಮತ್ತು ಡಬ್ಲ್ಯೂಸಿಸಂಖ್ಯೆ: 229/2016 ರಲ್ಲಿನ ಅಭಿರಕ್ಷೆ ವ್ಯವಹರಣೆಯನ್ನು ಪ್ರಾರಂಭಿಸಿದ ನಂತರದ ದಸ್ತಾವೇಜುಗಳಾಗಿರುತ್ತವೆ.ಈ ಬಾಡಿಗೆ ಒಪ್ಪಂದದಿಂದ ನಿರ್ಣಯಕ್ಕೆ ಬರುವುದೇನೆಂದರೆ, ಅರ್ಜಿದಾರನು ಹೇಳಿದಂತೆ, ಅಭಿರಕ್ಷೆ ವ್ಯವಹರಣೆಯನ್ನು ಪ್ರಾರಂಭಿಸಿದ ದಿನದಂದು

ಬಹುಶಃ ಆಕೆಯು ಪಿ.ಜಿ.ಯಲ್ಲಿ ವಾಸಿಸುತ್ತಿದ್ದಿರಬಹುದು ಎಂಬುದಾಗಿದೆ.ಆದ್ದರಿಂದ, ಪ್ರತ್ಯರ್ಜಿದಾರಳು, ಅವಳ ಮಗುವಿನ ಅಭಿರಕ್ಷೆಗೆ ಅರ್ಜಿಯನ್ನು ಸಲ್ಲಿಸಿದ ಸಮಯದಲ್ಲಿ ವಿಖ್ಯಾತ್ ಬೆಂಗಳೂರಿನ ಸಾಮಾನ್ಯ ವಾಸಿಯಾಗಿರಲಿಲ್ಲ ಎಂದು ಈ ಎಲ್ಲಾ ಸಂದರ್ಭಗಳಲ್ಲಿ ಅಭಿಪ್ರಾಯಪಡಲು ಸಾಧ್ಯವಿರುವುದಿಲ್ಲ.

13. ಮಗುವಿನ ಅನುಕೂಲತೆಯನ್ನೂ ಸಹ ಪರಿಗಣಿಸಬೇಕು.ವ್ಯವಹರಣೆಗಳನ್ನು ಬೆಂಗಳೂರಿನಲ್ಲಿ ನಡೆಸಲು ಅನುಮತಿಸಿದರೆ, ನ್ಯಾಯಾಲಯವು ಮಗುವನ್ನು ಹಾಜರುಪಡಿಸಬೇಕೆಂದು ಯಾವಾಗ ನಿರ್ದೇಶಿಸುತ್ತದೆಯೋ, ಆವಾಗಲೆಲ್ಲಾ ಮಗುವು ಬೆಳಗಾವಿಯಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಬೇಕಾಗಿದ್ದು ಅದು ಮಗುವಿನ ಹಿತದೃಷ್ಟಿಯಿಂದ ಸಾಧ್ಯವಾಗುವುದಿಲ್ಲ ಮತ್ತು ಸುಗಮವಾಗಿರುವುದಿಲ್ಲ.ಹೀಗಾಗಿ, ಈ ಎಲ್ಲಾ ಸನ್ನಿವೇಶಗಳಿಂದ ಬೆಳಗಾವಿಯೇ ವಿಖ್ಯಾತ್ನ ಸಾಮಾನ್ಯ ವಾಸಸ್ಥಳ ಎಂಬ ನಿರ್ಣಯಕ್ಕೆ ನಾವು ಬಂದಿದ್ದು, ಅಭಿರಕ್ಷೆಗೆ ಸಂಬಂಧಪಟ್ಟಂತೆ ಬೆಳಗಾವಿಯಲ್ಲಿನ ನ್ಯಾಯಾಲಯ ಮಾತ್ರ ಅಭಿರಕ್ಷೆಗೆ ಸಂಬಂಧಪಟ್ಟ ವಿವಾದಾಂಶವನ್ನು ತೀರ್ಮಾನಿಸತಕ್ಕದ್ದು ಎಂಬ ನಿರ್ಣಯಕ್ಕೆ ಬಂದಿರುತ್ತೇವೆ.ಈ ಚರ್ಚೆಯಿಂದ ಈ ಕೆಳಗಿನಂತೆ ಆಜ್ಞೆ ನೀಡಲಾಗಿದೆ.

ಆಜ್ಞೆ

1) ಅರ್ಜಿಯನ್ನು ಪುರಸ್ಕರಿಸಲಾಗಿದೆ.

(ii) ಕೌಟುಂಬಿಕ ನ್ಯಾಯಾಲಯ ಬೆಂಗಳೂರು, ಇಲ್ಲಿನ ಮೂರನೇ ಹೆಚ್ಚುವರಿ ಪ್ರಧಾನ ನ್ಯಾಯಾಧೀಶರವರ ಕಡತದಲ್ಲಿ ಬಾಕಿಯಿರುವ ಜಿ ಮತ್ತು ಡಬ್ಲ್ಯೂಸಿ.229/2016 ರನ್ನು, ಕಾನೂನಿನ ಪ್ರಕಾರ ವಿಲೇವಾರಿ ಮಾಡಲು ಕೌಟುಂಬಿಕ ನ್ಯಾಯಾಲಯ, ಬೆಳಗಾವಿಗೆ ವರ್ಗಾಯಿಸಲಾಗಿರುತ್ತದೆ.

(iii) ಮೂರನೇ ಹೆಚ್ಚುವರಿ ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಬೆಂಗಳೂರು, ಇವರು ಜೀ ಮತ್ತು ಡಬ್ಲ್ಯೂಸಿ 229/2016 ರ ಸಂಪೂರ್ಣ ದಾಖಲೆಗಳನ್ನು ಕೌಟುಂಬಿಕ ನ್ಯಾಯಾಲಯ, ಬೆಳಗಾವಿಗೆ ತಕ್ಷಣವೇ ವರ್ಗಾಯಿಸತಕ್ಕದ್ದು.

(iv) ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.